ಮಧ್ಯಾಹ್ನದ ನಂತರ ಫೋನ್ ಮಾಡಿದರೆ ಒಳ್ಳೆಯದು ಎಂಬ ಸೂಚನೆ ಹಾಕಿ ತನ್ನ ಮೊಬೈಲ್ ನಂಬರನ್ನು ನಮೂದಿಸಿದಳು.

ಕವರ್ ಮೇಲೆ ಅಮಿತಾಭ್ ಬಚ್ಚನನ ಅಡ್ರೆಸ್ ಬರೀಬೇಕಲ್ಲ. ಆಕೆಗೆ ತಂದೆ ಹೇಳುತ್ತಿದ್ದ ಕಥೆಯೊಂದು ನೆನಪಾಯಿತು. ದೀವಾರ್ ಸಿನಿಮಾ ನೋಡಿ ಖುಷಿಯಾದವರೊಬ್ಬರು 'ಅಮಿತಾಭ್ ಬಚ್ಚನ್, ಅಲಹಾಬಾದು' ಎಂದು ಬರೆದು ಮೆಚ್ಚುಗೆ ಪತ್ರವನ್ನು ಕಳುಹಿಸಿದ್ದರಂತೆ. ಪೋಸ್ಟ್ ಮ್ಯಾನು ಕ್ಲೈವ್ ರೋಡಿನಲ್ಲಿರುವ ಮನೆಗೇ ಆ ಪತ್ರ ಮುಟ್ಟಿಸಿದ್ದನಂತೆ. ಸಹನಾಬಾನು 'ಅಮಿತಾಭ್ ಬಚ್ಚನ್, ಕೆಬಿಸಿ, ಸೋನಿ ಟಿವಿ, ಮುಂಬೈ' ಎಂದು ಬರೆದು ಅಂಚೆ ಡಬ್ಬಿಗೆ ಕೈಮುಗಿದು ಕವರನ್ನು ಪೋಸ್ಟ್ ಮಾಡಿದಳು.

ಅಲ್ಲಿಂದ ಪ್ರತಿದಿನ ಮೊಬೈಲನ್ನು ಮತ್ತೆಮತ್ತೆ ನೋಡುವ, ಯಾವಕ್ಷಣವೂ ಮೊಬೈಲ್ ಬಿಟ್ಟಿರಲಾಗದ ಕಾಯಿಲೆ ಅವಳನ್ನು ಅಂಟಿಕೊಂಡಿತು. ಕೆಬಿಸಿ ಕಾರ್ಯಕ್ರಮದ ಕೊನೆಯತನಕ ನೋಡುವುದೂ ಅನಿವಾರ್ಯವಾಯಿತು. ಆ ಪುಣ್ಯಾತ್ಮ ಯಾವಕ್ಷಣದಲ್ಲಿ ತನ್ನನ್ನು ಉದ್ದೇಶಿಸಿ ಮಾತನಾಡುತ್ತಾನೋ ಎಂಬ ತವಕ ಆಕೆಯನ್ನು ತಡರಾತ್ರಿಯತನಕ ಎಚ್ಚರ ಇರುವಂತೆ ಮಾಡಿತು.

ಆಮೇಲೊಂದು ದಿನ ಆಕೆ ನಿರೀಕ್ಷಿಸದ ಹೊತ್ತಲ್ಲಿ ಮೊಬೈಲಲ್ಲಿ ದಾಖಲಿಸಿಕೊಳ್ಳದ ಅಪರಿಚಿತ ನಂಬರ್ ಒಂದರಿಂದ ಸಹನಾಬಾನುವಿಗೆ ಫೋನ್ ಬಂತು.

'ಸಹನಾ ಬಾನೂಜಿ ಮೈ ಅಮಿತಾಭ್ ಬಚ್ಚನ್ ಬೋಲ್ ರಹಾ ಹೋಂ. ಕೌನ್ ಬನೇಗಾ ಕ್ರೋರ್ ಪತೀಸೇ.'

'ಸರ್... ಸರ್ ಮೈ ಸಹನಾ ಬಾನು. ಕನ್ನಡ ಬಿಟ್ಟು ಬೇರೆ ಭಾಷೆ ನಹೀ ಆತಾ ಸಾರ್.'

'ಪರವಾಗಿಲ್ಲ. ನನಗೆ ಕನ್ನಡ ಬರುತ್ತೆ. ಕನ್ನಡದಲ್ಲೇ ಮಾತಾಡಿ.'

ಮುಂದಿನ ಅರ್ಧ ಗಂಟೆ ಸಹನಾಬಾನು ತನ್ನ ಕಥೆಯನ್ನೆಲ್ಲ ಮತ್ತೊಮ್ಮೆ ಹೇಳಿಕೊಂಡಳು.

ಅಮಿತಾಬ್ ಬಚ್ಚನ್ ಸುಮ್ಮನೆ ಹೂಂಗುಟ್ಟುತ್ತಿದ್ದರು.

ಕೊನೆಯಲ್ಲಿ ಕೇಳಿದರು, 'ಸಹನಾಬಾನೂಜಿ, ನೀವು ಉಡುಪಿಯವರು ಎಂದಿರಿ. ನಿಮ್ಮ ತಂದೆಯ ಹೆಸರು ಏನೆಂದಿರಿ? ಧನಂಜಯ ಶೆಟ್ಟರು? ಮೇಲ್ಮನೆ ಧನಂಜಯ ಶೆಟ್ಟರು?'

'ಹೌದು. ಯಾಕೆ ನಿಮಗವರು ಗೊತ್ತಾ?'

'ನೋಡಿ ನಿಮ್ಮನ್ನು ಕೆಬಿಸಿಗೆ ಕರೆಯೋದಿಲ್ಲ. ಇಲ್ಲಿನ ಕಷ್ಟದ ಪ್ರಶ್ನೆಗಳಿಗೆ ಉತ್ತರ ಕೊಡೋದು ನಿಮ್ಮಿಂದ ಸಾಧ್ಯವೂ ಇಲ್ಲ. ಪ್ರಶ್ನೆಯ ಬದಲು ನಿಮ್ಮ ಸಮಸ್ಯೆಗೆ ಉತ್ತರವನ್ನೇ ಕಳುಹಿಸಿದರೆ ಹೇಗೆ ನೋಡೋಣ. ನಿಮಗೆ ಒಳಿತಾಗುತ್ತದೆ, ಶುಭವೂ ಆಗುತ್ತದೆ.'

'ಅಮಿತಾಭರ ಸ್ವರ ಯಾಕೋ ಸರಿಯಿಲ್ಲವಲ್ಲ, ಶೀತವಾಗಿರಬೇಕು' ಎಂದುಕೊಳ್ಳುತ್ತಿರುವಾಗಲೇ ಫೋನ್ ಡಿಸ್‌ಕನೆಕ್ಟ್ ಆಯಿತು.

ಈ ಘಟನೆ ನಡೆದ ಮೂರು ದಿನಗಳ ನಂತರ ಧನಂಜಯ ಶೆಟ್ಟರು ಸಹನಾಬಾನುವನ್ನು ಹುಡುಕಿಕೊಂಡುಬಂದರು. ಇಪ್ಪತ್ತೊಂದು ವರ್ಷಗಳ ನೋಂಪಿ ಅವರನ್ನು ಹಣ್ಣಾಗಿಸಿತ್ತು. ಮಗಳನ್ನು ತಬ್ಬಿಕೊಂಡು ಅತ್ತರು.


ಮೊಮ್ಮಕ್ಕಳೂ ಈ ಅಳುವಿಗೆ ಸೇರಿಕೊಂಡರು.

ಕುರೇಷಿ ತಾನೇನು ಮಾಡಬೇಕೆಂದು ತೋಚದೇ ದಿಗಿಲಲ್ಲಿ ನಿಂತಿದ್ದ.

***

ಸಹನಾಬಾನು ಅಮಿತಾಭ್ ಬಚ್ಚನನಿಗೆ ಮತ್ತೊಂದು ಕೃತಜ್ಞತಾ ಸಮರ್ಪಣ ಪತ್ರ ಬರೆಯುತ್ತಿದ್ದರೆ, ಧನಂಜಯ ಶೆಟ್ಟರು ಅಮಿತಾಭ್ ಬಚ್ಚನನಿಗೆ ಬರೆದ ಅವಳ ಮೊದಲ ಪತ್ರವನ್ನು ತಮಗೆ ತಂದುಕೊಟ್ಟು, ಈ ಮಿಲನವನ್ನು ಸಾಧ್ಯಮಾಡಿಕೊಟ್ಟ ಪೋಸ್ಟ್ ಮಾಸ್ಟರಿಗೆ ಫೋನ್ ಮಾಡಿ ಥ್ಯಾಂಕ್ಸ್ ಹೇಳುತ್ತಿದ್ದರು.

ಪ್ರತಿಕ್ರಿಯಿಸಿ: feedback@sudha.co.in



# ಬ್ರೂಗ್ಸ್‌ನಲ್ಲೊಂದು ಕುದುರೆಮುಖ

**ಬೆಲ್ಜಿಯಂನ ಬ್ರೂಗ್ಸ್ ನಗರಕ್ಕೂ ಕುದುರೆಗಳಿಗೂ ಇನ್ನಿಲ್ಲದ ನಂಟು. ಕುದುರೆಗಳು ಮಾತ್ರವಲ್ಲ, 'ಕುದುರೆ ಸ್ಮಾರಕ'ವೂ ಆ ನಗರದಲ್ಲಿದೆ.**

■ **ಜಿ.ನಾಗೇಂದ್ರ ಕಾವೂರು**

ಬ್ರೂಗ್ಸ್ ನಗರ ಬೆಲ್ಜಿಯಂ ದೇಶದ ಪ್ರಸಿದ್ಧ ಪ್ರವಾಸಿ ಸ್ಥಳಗಳಲ್ಲೊಂದು. ಪ್ರವಾಸಿಗರು ನಡೆದುಕೊಂಡೋ ವಾಹನಗಳಲ್ಲಿ ಕೂತೋ ನಗರ ಪ್ರದಕ್ಷಿಣೆ ಮಾಡುತ್ತಾರಷ್ಟೇ. ಬ್ರೂಗ್ಸ್ ನಗರದಲ್ಲೂ ಕಾಲ್ನಡಿಗೆಯಲ್ಲಿ ಪ್ರವಾಸಿಗರು ಊರು ಸುತ್ತುತ್ತಾರೆ. ಊರು ಸುತ್ತಿಸಲು ಕುದುರೆ ಗಾಡಿಗಳೂ ಅಲ್ಲಿವೆ. ಹಾಂ, ಮತ್ತೊಂದು ವಿಶೇಷವೂ ಇದೆ. ಆಕರ್ಷಕ ವಿನ್ಯಾಸದ ಕುದುರೆ ಗಾಡಿಗಳನ್ನು ನಡೆಸುವುದು ಮಹಿಳೆಯರು!

ನಗರದ ಕೇಂದ್ರ ಭಾಗದಲ್ಲಿ ಕುದುರೆ ಗಾಡಿಗಳ ನಿಲ್ದಾಣವಿದೆ. ಅದರ ಸಮೀಪವೇ ಸಾಕಷ್ಟು ವಾಣಿಜ್ಯ ಮಳಿಗೆಗಳು ಹಾಗೂ ಹೋಟೆಲ್‌ಗಳಿವೆ.

ಕುದುರೆಗಳಿಗೆ ಸಂಬಂಧಿಸಿದಂತೆ ಬ್ರೂಗ್ಸ್‌ನಲ್ಲಿ ಮತ್ತೊಂದು ಆಕರ್ಷಣೆಯಿದೆ. ಅದು, ಕಂಚಿನಿಂದ ತಯಾರಿಸಲಾದ ಕುದುರೆಮುಖದ ಸ್ಮಾರಕ. ಪ್ರವಾಸಿಗರ ನಗರ ವೀಕ್ಷಣೆಗೆ ಕುದುರೆಗಳು ಸಲ್ಲಿಸುತ್ತಿರುವ ಸೇವೆಗೆ ಕೃತಜ್ಞತೆಯನ್ನು ತಿಳಿಸಲಿಕ್ಕಾಗಿ ಆ ಸ್ಮಾರಕ ರೂಪುಗೊಂಡಿದೆ. ಕಾರಣ ಏನಾದರೂ ಇರಲಿ, ಆ ಸ್ಮಾರಕವೂ ಬೆಲ್ಜಿಯಂನ ಪ್ರವಾಸಿ ಆಕರ್ಷಣೆಗಳಲ್ಲಿ ಸೇರಿಕೊಂಡಿದೆ.

ಕುದುರೆಯ ಬಾಯಿಂದ ನೀರು ಬೀಳುತ್ತದೆ. ಆ ನೀರು ಕೆಳಗಡೆಯಿರುವ ತೊಟ್ಟಿಯಲ್ಲಿ ಸಂಗ್ರಹವಾಗುತ್ತದೆ. ತೊಟ್ಟಿ ತುಂಬಿದ ತಕ್ಷಣ ನೀರು ಬೀಳುವುದು ನಿಲ್ಲುತ್ತದೆ. ಕುದುರೆಗಳಿಗೆ ನೀರುಣಿಸಲು ಆ ನೀರನ್ನು ಬಳಸಲಾಗುತ್ತದೆ. ನೀರು ಖಾಲಿಯಾದ ನಂತರ ಮತ್ತೆ ಕುದುರೆ ಬಾಯಿಂದ ನೀರು. ಇದೆಲ್ಲ ನೀರಿನಾಟ ಸ್ವಯಂ ಚಾಲಿತ ತಂತ್ರಜ್ಞಾನದಿಂದ ನಡೆಯುತ್ತದೆ. ಬ್ರೂಗ್ಸ್ ನಗರಕ್ಕೆ ಬರುವ ಪ್ರವಾಸಿಗರು ತಪ್ಪದೆ 'ಕುದುರೆಮುಖ'ಕ್ಕೆ ಭೇಟಿ ಕೊಡುತ್ತಾರೆ.

ನಗರೀಕರಣ ತೀವ್ರವಾದಂತೆ ಪ್ರಾಣಿಗಳೊಂದಿಗಿನ ಸಂಬಂಧ ತೆಳುವಾಗುವುದು ಸಾಮಾನ್ಯ. ಆದರೆ, ಬ್ರೂಗ್ಸ್‌ನಲ್ಲಿ ಆಧುನಿಕತೆಯ ನಡುವೆಯೂ 'ಕುದುರೆಮುಖ'ದ ಪ್ರಾಣಿಪ್ರೀತಿ ನಗರದ ಪ್ರಮುಖ ಚಹರೆಗಳಲ್ಲೊಂದಾಗಿ ಉಳಿದಿರುವುದು ವಿಶೇಷ. ■